ಛೆ... ಎಂಥ ಕೆಟ್ಟ ಮಡಿ ತಮ್ಮನೇಲಿ ಎಂದು ಹಲ್ಲು ಮುಡಿಗಚ್ಚಿತು. ಮೂವತ್ತು-ಮೂವತ್ತೈದು ವರ್ಷಗಳಿಂದ ತಮ್ಮ ಮನೆಗೆ ಲೆಟ್ರಿನ್ ತೊಳೆಯಲು ಬರುವ ಗಂಗಮ್ಮ ನೆನಪಿಗೆ ಬಂದಳು. ಕಕ್ಕಸು ತೊಳೆಯಲು ತೆಂಗಿನ ಪೊರಕೆ ಕಂಕುಳಲ್ಲಿ ಇರುಕಿಕೊಂಡು ಬರುವ ಅವಳ ಹೆಜ್ಜೆಗಳ ಮೇಲೆ ನೀರು ಚುಮುಕಿಸುತ್ತಿದ್ದಿದ್ದು ಎಲ್ಲ ನೆನಪಿಗೆ ಬಂತು...ಮನಸ್ಸು ಹುಳ್ಳಗಾಯಿತು. ಮನೆಯ ಹಿರಿಯರದು ಎಂಥ ಹುಂಬತನ ಎನಿಸಿದರೂ ಅವರನ್ನು ಎದುರಿಸುವ ಧೈರ್ಯ ಸತ್ತುಹೋಗಿತ್ತು.

ತನ್ನ ಮನಸ್ಸು ಗೆದ್ದ ಆ ನಗುಮೊಗದ ಡಾಕ್ಟರ್ ಯಾವ ಜಾತಿಯವನಾದರೇನಂತೆ? ಕೊಕ್ಕರೆ ಬಿಳುಪಿನ ಗರಿಗರಿ ಶರ್ಟಿನಲ್ಲಿ ಎಂಥ ದಿವಿನಾಗಿ ಕಾಣುತ್ತಾನೆ. ಮಿರಿಮಿರಿ ಹೊಳೆವ ಆಕರ್ಷಕ ಮುಖ. ಶುದ್ಧವಾಗಿ, ನೀಟಾಗಿ ಟಿಪ್ ಟಾಪಾಗಿದ್ದಾನೆ!

ಮನಸ್ಸು ಲಾಗ ಹೊಡೆಯುತ್ತಿತ್ತು. ಅವನಿಗಂಟಿಕೊಂಡ ಮನಸ್ಸು, ತನ್ನದೇ ತರ್ಕದಲ್ಲಿ ಸಮಾಧಾನ ಅರಸುತ್ತಿತ್ತು. ಇದೆಂಥ ಕೆಟ್ಟ ವ್ಯವಸ್ಥೆ... ಮನದೊಳಗೆ ದೊಡ್ಡ ಚರ್ಚಾಸ್ಪರ್ಧೆ ಆರಂಭವಾಗಿತ್ತು. ಮನೆಯಲ್ಲೂ ಆಗಾಗ ಜಾತಿ ನಿರ್ಮೂಲನೆಯ ಬಗ್ಗೆ ದೊಡ್ಡ ಪ್ರಗತಿಪರ ಭಾಷಣ ಕೊಟ್ಟು ಇನ್ನು ಮುಂದೆ ಸಂಭವಿಸಬಹುದಾದ ಘಟನೆಗೆ ಪರಿಸರವನ್ನು ಹದ ಮಾಡುವ ಪ್ರಯತ್ನ ಅವಳದಾಗಿತ್ತು. ತಾನು ಅವನನ್ನು ಮದುವೆಯಾಗುವ ವಿಷಯವನ್ನು ಮನೆಯಲ್ಲೇನಾದರೂ ತಿಳಿಸಿದರೆ ಎಲ್ಲರೂ ಸ್ವಲ್ಪ ಸ್ಪ್ರಿಂಗ್ ಕಿತ್ತ ಬೊಂಬೆಗಳಂತೆ ಪುಟ ನೆಗೆಯಬಹುದು. ಕೂಗಾಡಿ ಹಾರಾಡಬಹುದು. ಅವನ ವಿದ್ಯೆ, ರೂಪು, ನಡವಳಿಕೆಗಳು ಕ್ರಮೇಣ ಅವರನ್ನು ಮತ್ತೆಗಾಗಿಸಬಹುದು ಎಂದುಕೊಂಡು ಮನಸ್ಸಿನಲ್ಲೇ ಸಿಹಿಗನಸು ಹೆಣೆದುಕೊಳ್ಳುತ್ತ, ಈಗಲೇ ಇದರ ಪ್ರಸ್ತಾಪ ಬೇಡವೆಂದು ತನ್ನ ತನ್ನ ಭಾವನೆ-ವಿಚಾರಗಳನ್ನು ಒಳಗೇ ನೆನೆ ಹಾಕಿದಳು. ಅವನಿಗೂ ತಾನೂ ಅವನಿಗೆ ಮನಸೋತಿರುವ ಗುಮಾನಿ ಬರದಂತೆ ಸೂಕ್ಷ್ಮವಾಗಿ ನಡೆದುಕೊಂಡಳು.

ಇದು ತಿಂಗಳಾನುಗಟ್ಟಲೆ ನಡೆಯಿತು. ಒಳಗೊಳಗೇ ಅವ್ಯಕ್ತ ತಲ್ಲಣ ಪ್ರಾರಂಭವಾಗಿತ್ತು. ಅರಿಯದ ತೊಳಲಾಟ ಕುಟುಕಲಾರಂಭಿಸಿತ್ತು. ಮನೆಯವರ ವಿರೋಧ ಕಟ್ಟಿಕೊಂಡು ಇವನನ್ನು ನೆಚ್ಚಿಕೊಂಡು, ಇವನ ವಿಚಾರಧಾರೆಗಳನ್ನು ಸಹಿಸಿಕೊಂಡು ತನ್ನ ಜೀವನವನ್ನು ಅವನಿಗೊಪ್ಪಿಸುವುದು ತರವೇ ಎಂಬ ಅವ್ಯಕ್ತ ಹೊಯ್ದಾಟ ಹೆಚ್ಚಾದಂತೆ ಅವಳು, ಮೆಲ್ಲ ಮೆಲ್ಲನೆ ಅವನಿಂದ ದೂರ ಸರಿಯತೊಡಗಿದ್ದಳು.

ಎಷ್ಟೋಬಾರಿ ಅವಳು ಒಂಟಿಯಾಗಿ ಕೂತಾಗ ಯೋಚಿಸುತ್ತಾಳೆ – ಈ ಮನುಷ್ಯ ಪ್ರಾಣಿಗಳು ಎಂಥ ಸ್ವಾರ್ಥಿಗಳು! ಸ್ವಂತ ತನ್ನ ವ್ಯಕ್ತಿತ್ವದ ಪೋಸ್ಟ್ ಮಾರ್ಟಂಗೆ ತೊಡಗುತ್ತಾಳೆ. ಅವನು ಅಂಥ ಜಾತಿಯವನು ಅಂತ ಗೊತ್ತಿದ್ದರೂ, ಅವನ ಅತೀವ ಮೋಹದ ಸೆಳೆತದಿಂದ, ಜಾತಿ ಅನ್ನೋದೇ ಇಲ್ಲ, ಸುಳ್ಳು, ಅದಕ್ಕೆ ನಾನು ಮಹತ್ವ ಕೊಡಲ್ಲ ಹಾಗೇ ಹೀಗೆ ಅಂತ ತನ್ನ ಮೂಗಿನ ನೇರ ವಾದ ಹೊಸೆದಿದ್ದೆ. ಆದರೆ ಈಗ ಪ್ರೀತಿಯ ಕಾವು ಆರಿದ್ದಕ್ಕೋ, ಮದುವೆಯಾಗಲಾರೆ ಎಂದು ಅನಿಸಿದ್ದಕ್ಕೋ ಜಾತಿ ಎನ್ನೋದು ದೊಡ್ಡ ಪೆಡಂಭೂತವಾಗಿ ಎದುರು ಕಣ್ಣರಳಿಸಿ ನಿಂತ ಹಾಗೆ, ಮೈಯೆಲ್ಲ ನೀರಾದ ಹಾಗೆ ಏನೇನೋ ಆಗಿ, ಅಷ್ಟೆಲ್ಲ ಸುಲಭವಾಗಿ ಜಾತಿ ಬಿಡೋಕ್ಕೆ ಸಾಧ್ಯವಿಲ್ಲ. ನನ್ನ ಕೈಯಿಂದಂತೂ ಕ್ರಾಂತಿ ಅಸಾಧ್ಯ. ನನ್ನ ಪಾಡಿಗೆ ನಾನು ಲಕ್ಷಣವಾಗಿ ನಮ್ಮ ಜನದ ಹುಡುಗನ್ನೇ ಮದುವೆಯಾಗ್ತೀನಿ ಎನ್ನುವ ನೂರೆಂಟು ಭಾವನೆಗಳು ಮಿಡುಕಾಡಿದ್ದು ಈ ಸ್ವಾರ್ಥದ ಮುಖವೇ. ವಸ್ತು ಬೇಕಾದಾಗ, ಅದರ ಅಡ್ಡಿಯನ್ನು ನಿವಾರಣೆ ಮಾಡೋದು ಗೊತ್ತು, ಬೇಡಾದಾಗ ಅದನ್ನೇ ಗೋಡೆಯಾಗಿ ಎದ್ದು ನಿಲ್ಲಿಸೋ ಮರ್ಮಾನೂ ಉಂಟು. ಬೇಕೆಂದತ್ತ ಹೊರಳುವ ತನ್ನ ಮನಸ್ಸಿನ ವಿಚಿತ್ರ ಸುಳಿಯನ್ನು ಕಂಡು ವಿಭ್ರಮಿತಳಾದಳು.

ಮತ್ತೊಮ್ಮೆ ಅವಳ ತಂದೆ ತಾಯಿಗಳೇ ಸೂಚಿಸಿದ ಹುಡುಗ ಲಕ್ಷ್ಮಣವಾಗಿದ್ದ. ಅವಳೂ ಹೂಂಗುಟ್ಟಿದ್ದಳು. ಅವನಿಗೆ ಅವಳ ಮೇಲೆ ಮನಸ್ಸಿದ್ದರೂ ಕಾಮಣ್ಣನಂತೆ ಅವಳ ಹಿಂದೆ ಮುಂದೆ ಸುಳಿದಾಡುತ್ತಿರಲಿಲ್ಲ. ಮದುವೆ ಮನೆಯೊಂದರಲ್ಲಿ ಸಿಕ್ಕ ಅವನು ಬಹಳ ಸಭ್ಯನಂತೆ ಅವಳ ಕುಶಲ ಕೇಳಿದ ಶಾಸ್ತ್ರ ಮಾಡಿದವನು ತನ್ನ ಪಾಡಿಗೆ ತಾನು ಯುವಕರ ತಂಡದಲ್ಲಿ ಮುಳುಗಿಹೋದ. ಆಗವಳಿಗೆ ಅವನನ್ನು ಗುದ್ದಿ ಹಾಕಿಬಿಡುವಷ್ಟು ಕೋಪ. ತನ್ನ ಬಗ್ಗೆ ಅವನ ಪ್ರೀತಿ ತೀವ್ರವಾಗಿಲ್ಲವೆಂಬ ಗುಮಾನಿ. ತನ್ನ ಗೆಳತಿಯರ ಪ್ರಿಯಕರರಂತೆ ಹಾದು ಹೋಗುವಾಗಲೆಲ್ಲ ಪ್ರೇಮವನ್ನು ಕಣ್ಣಿಂದ ಎರಚುತ್ತ ದೂರದಿಂದಲೇ ತನ್ನನ್ನು ಮುದ್ದಿಸುತ್ತ ಹೋಗಬಾರದೇ ಎನಿಸಿತ್ತು. ಹಾಗೇನೂ ನಡೆಯಲಿಲ್ಲ. ಅವನ ಗಂಭೀರ